ಆರ್ಥಿಕ ಲಾಭ ನಷ್ಟಗಳ ಆಧಾರದಲ್ಲಿಯೇ ನಿರ್ಧರಿಸಲಾಗುತ್ತದೆ. ಎಲ್ಲವನ್ನೂ ಹಣದಿಂದಲೇ ಅಳೆಯುವ ಉದ್ಯಮಗಳು–ಉದ್ಯಮಪತಿಗಳು, ಮಹಿಳೆಯೊಬ್ಬಳು ಗರ್ಭಿಣಿಯಾದರೆ ಆಕೆ ಕಾರ್ಯನಿರ್ವಹಿಸುವ ದಿನಗಳ (working days) ಸಂಖ್ಯೆ ಕಡಿಮೆಯಾಗುತ್ತವೆ ಎಂಬ ಆತಂಕವನ್ನು ಹೊಂದಿರುತ್ತವೆ. ಈ ಬಗ್ಗೆ ನೇರವಾಗಿ ಯಾವುದೇ ಆಕ್ಷೇಪವನ್ನು ವ್ಯಕ್ತಪಡಿಸದೇ ಇದ್ದರೂ, ಮಹಿಳಾ ಸಿಬ್ಬಂದಿಯೊಬ್ಬರು ಗರ್ಭಿಣಿಯಾದ ಕೂಡಲೇ, ಉದ್ಯೋಗಕ್ಕೆ ರಾಜೀನಾಮೆ ಕೊಡುವಂತೆ ಪರೋಕ್ಷವಾಗಿ ಸೂಚಿಸಲಾಗುತ್ತದೆ. ಅಥವಾ ಕೆಲವು ವೃತ್ತಿಗಳಿಗೆ ಮಹಿಳೆಯರು ಅರ್ಜಿ ಸಲ್ಲಿಸದಂತೆ ಸೂಚನೆಯನ್ನು ಪರೋಕ್ಷವಾಗಿ ಹರಿಯಬಿಡಲಾಗುತ್ತದೆ. ಮತ್ತೆ ಕೆಲವೆಡೆ ರಾಜಾರೋಷವಾಗಿ ಪ್ರತ್ಯಕ್ಷವಾಗಿ ಸೂಚಿಸುವ ಉದಾಹರಣೆಗಳೂ ಇವೆ. ಇನ್ನೊಂದೆಡೆ, ಇದೇ ಉದ್ಯಮಪತಿಗಳು, ಆದರ್ಶದ ಸಿದ್ಧಾಂತಗಳ ಕುರಿತು ಅಥವಾ ಜೀವನ ಮೌಲ್ಯಗಳ ಕುರಿತು ಮಾಡುವ ಭಾಷಣಗಳಲ್ಲಿ ಮಾತ್ರ, ಹಣವೊಂದರಿಂದಲೇ ಎಲ್ಲ ಸಂತೋಷವನ್ನೂ ಕೊಂಡುಕೊಳ್ಳಲಾಗದೆಂದೂ, ಮಕ್ಕಳನ್ನು ಪಡೆಯುವ ಮತ್ತು ಅವರನ್ನು ದೇಶದ ಉತ್ತಮ ಪ್ರಜೆಯನ್ನಾಗಿ ಬೆಳೆಸುವ ಸಂತೋಷವನ್ನು 'ಬ್ಯಾಂಕ್ ಡೆಪಾಸಿಟ್'ಗಳು ನೀಡುವುದಿಲ್ಲ ಎಂದೂ ಹೇಳಲಾಗುತ್ತದೆ.

ಏನೆಲ್ಲ ಮಾತನಾಡಿದರೂ ವ್ಯಕ್ತಿಯೊಬ್ಬನ ಯಶಸ್ಸನ್ನು ಆತನ ಗಳಿಕೆ–ವೇತನ, ಆಸ್ತಿ, ಸಂಪತ್ತನ್ನು ಆಧರಿಸಿಯೇ ನಿರ್ಧರಿಸಲಾಗುತ್ತಿರುವ ದಿನಗಳಿವು. ಆದ್ದರಿಂದ ಯಾವುದೇ ಆದರ್ಶಗಳ ಮಾತುಗಳನ್ನಾಡಿದರೂ ಸದ್ಯದ ವಾಸ್ತವ ಸ್ಥಿತಿಯೇನಿದ್ದರೂ ಗಳಿಕೆಯನ್ನೇ ಆಧರಿಸಿದೆ ಎಂದಾಯಿತು. ಹೀಗೆ ಹೆಚ್ಚು ವೇತನ ಪಡೆಯುವ, ವೃತ್ತಿ ಕ್ಷೇತ್ರದಲ್ಲಿ ಉನ್ನತ ಹುದ್ದೆಗಳನ್ನು ಏರುವ ಕನಸು ಹೊತ್ತ ಮಹಿಳೆಯರು ಹೆರಿಗೆಗೆಂದು ರಜೆ ಪಡೆದಾಗ ಅವರಿಗೆ ಆಗುವ ನಷ್ಟಗಳೇನು ಎಂಬುದನ್ನು ವಿಶ್ಲೇಷಿಸುವ ಸಂದರ್ಭದಲ್ಲಿ ಹುಟ್ಟಿದ ಪದವೇ 'ಮದರ್‌ಹುಡ್ ಪೆನಾಲ್ಟಿ'.

ಫಾರ್ಚ್ಯೂನ್.ಕಾಂ, ಮದರ್‌ಹುಡ್ ಪೆನಾಲ್ಟಿಯ ಬಗ್ಗೆ 2024ರಲ್ಲಿ ಒಂದು ಅಧ್ಯಯನ ವರದಿ ಪ್ರಕಟಿಸಿತ್ತು. ಒಂದು ಮಗುವನ್ನು ಪಡೆಯುವ ಸಂದರ್ಭದಲ್ಲಿ ವೃತ್ತಿಪರ ಮಹಿಳೆಯೊಬ್ಬಳು ಎಷ್ಟು ಆದಾಯವನ್ನು ಕಳೆದುಕೊಳ್ಳಬೇಕಾಗುತ್ತದೆ ಎಂಬ ಅಧ್ಯಯನವೊಂದರ ಸಾರವನ್ನು ಲೇಖನವನ್ನಾಗಿ ಪ್ರಕಟಿಸಲಾಗಿತ್ತು. ಅಧ್ಯಯನದ ಸಾರಾಂಶವನ್ನು ಗಮನಿಸಿದರೆ, 2023ರಲ್ಲಿ 18 ವರ್ಷದೊಳಗಿನ ಮಕ್ಕಳನ್ನು ಹೊಂದಿರುವ, ಪೂರ್ಣಾವಧಿ ವೃತ್ತಿ ನಿರ್ವಹಿಸುವ ಮಹಿಳೆಯರು ವಾರ್ಷಿಕವಾಗಿ 55,276 ಡಾಲರ್ ಸಂಪಾದನೆ ಮಾಡಿದರೆ, ಪುರುಷರು ಅಂದರೆ ಅಪ್ಪಂದಿರು 72,780 ಡಾಲರ್ ಸಂಪಾದನೆ ಮಾಡಿದ್ದಾರೆ. ಅಂದರೆ, ಅಪ್ಪಂದಿರಿಗೆ ಅಥವಾ ಮಕ್ಕಳನ್ನು ಹೊಂದಿರುವ ಪುರುಷರಿಗೆ ಹೋಲಿಸಿದರೆ, ಮಹಿಳೆಯರ ಗಳಿಕೆಯು ಶೇ. 31ರಷ್ಟು ಕಡಿಮೆಯಾಗಿರುವುದನ್ನು ಅಧ್ಯಯನವು ಗಮನಿಸಿದೆ. ಮಾಸಿಕವಾಗಿ ಮಹಿಳೆಯ ಗಳಿಕೆಯಲ್ಲಿ 1,400 ಡಾಲರ್‌ನಷ್ಟು ಕಡಿಮೆಯಾಗಿದೆ ಎಂದಾಯಿತು. ಒಬ್ಬ ವ್ಯಕ್ತಿಯ ವೃತ್ತಿ ಬದುಕಿನುದ್ದಕ್ಕೂ ಈ ವ್ಯತ್ಯಾಸವು ಮುಂದುವರೆಯುತ್ತಲೇ ಹೋಗುವುದರಿಂದ ಒಟ್ಟಾರೆ ಸುಮಾರು 30 ವರ್ಷಗಳ ವೃತ್ತಿ ಜೀವನದಲ್ಲಿ ಮಹಿಳೆಯ ಸಂಪಾದನೆಯು ಅಂದಾಜು 500,000 ಡಾಲರ್‌ನಷ್ಟು ಕಡಿಮೆಯಾಗಿಬಿಡುತ್ತದೆ. ಬಡ್ತಿ, ಸಾಮಾಜಿಕ ಸ್ಥಾನಮಾನ, ಗೌರವ, ಸಾಮಾಜಿಕವಾಗಿ ನಿರ್ಣಯಗಳನ್ನು ತೆಗೆದುಕೊಳ್ಳುವ ಅವಕಾಶ – ಎಲ್ಲವೂ ಇದರೊಂದಿಗೆ ಕಡಿತವಾಗುತ್ತಲೇ ಹೋಗುತ್ತದೆ. ವೇತನ ಸಹಿತವಾಗಿರುವ ವೃತ್ತಿ ಕ್ಷೇತ್ರದಲ್ಲಿ ಮಹಿಳೆಗೆ ಆಗುವ ನಷ್ಟವನ್ನಷ್ಟೇ ಈ ಅಧ್ಯಯನವೂ ಹೇಳುತ್ತದೆ.




ಮದರ್‌ಹುಡ್ ಪೆನಾಲ್ಟಿ ಎನ್ನುವುದು ಬಹುತೇಕ ಸಂದರ್ಭಗಳಲ್ಲಿ ಮಹಿಳೆ ತಪ್ಪಿಸಲಾಗದ ವಿಷಯವೇ ಆಗಿದೆ. ಯಾಕೆಂದರೆ, ಯಾವುದೇ ಕ್ಷೇತ್ರದಲ್ಲಿ



> ಮಕ್ಕಳು ಮನುಕುಲದ ಆಸ್ತಿಯೆನ್ನುವುದು ನಿಜ. ಹಾಗೆಂದು ಅವರನ್ನು ಬೆಳೆಸುವ ಜವಾಬ್ದಾರಿಯನ್ನು ಮಹಿಳೆಯರ ಹೆಗಲಿಗೇ ವರ್ಗಾಯಿಸಿ ಸುಮ್ಮನಾಗುವ ಪರಿಪಾಟ ನಮ್ಮಲ್ಲಿ ತುಂಬಾ ಕಾಲದಿಂದ ನಡೆದು ಬಂದಿದೆ. ಎಂಥದ್ದೇ ಪರಿಸ್ಥಿತಿಯಲ್ಲಿ ಅಮ್ಮನಾದವಳು ಮಗುವಿನ ಏಳ್ಗೆಯ ಹೊರತಾಗಿ ಯೋಚನೆ ಮಾಡುವುದು ಸಾಧ್ಯವಿಲ್ಲ ಎಂಬುದನ್ನು ಗಮನಿಸಿಯೇ, ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಪ್ರಯತ್ನವನ್ನು ಪುರುಷರು ಮಾಡುತ್ತಿದ್ದಾರೆ ಅನಿಸುತ್ತದೆ. ನನ್ನ ಪ್ರಕಾರ ಒಂದು ಮಗುವನ್ನು ಪಡೆಯುವ ಅಥವಾ ಹಲವು ಮಂದಿ ಮಕ್ಕಳನ್ನು ಪಡೆಯುವ ಆಯ್ಕೆ ಹೆಣ್ಣಿನದ್ದೇ ಅಂತಿಮವಾಗಿರಬೇಕು. ತನ್ನ ದೈಹಿಕ ಮಾನಸಿಕ ಸಾಮರ್ಥ್ಯದ ಬಗ್ಗೆ ಆಕೆಗೆ ಸ್ಪಷ್ಟ ಅರಿವಿರುತ್ತದೆ. ಆ ಪ್ರಕಾರ ಆಕೆಯ ನಿರ್ಧಾರವನ್ನು ಗೌರವಿಸುವುದು ಮುಖ್ಯ.
>
> –ರೂಪ ಹಾಸನ,
> ಸಾಮಾಜಿಕ ಕಾರ್ಯಕರ್ತೆ